## ಹರಿಯಾಣಾ ಆಪರೇಷನ್

ಬೆಳಿಗ್ಗೆ ನಾನು ಕಚೇರಿಗೆ ಹೋಗುವಾಗ ಕಮಲಮ್ಮನ ಭೇಟಿಯಾಯ್ತು. ಓದುಬರಹ ಬಾರದ ಕಮಲಮ್ಮ ನಮ್ಮ ಬೀದಿಯ ಮನೆಯೊಂದರಲ್ಲಿ ಹಲ ವರ್ಷಗಳಿಂದ ಮನೆಗೆಲಸ ಮಾಡುತ್ತಿದ್ದಾರೆ. ಕೆಲ ದಿನಗಳ ಹಿಂದೆ ಹರಿಯಾಣಾದಲ್ಲಿ ಉದ್ಯೋಗದಲ್ಲಿರುವ ಅವರ ಮೊಮ್ಮಗನ ಬಳಿ ಹೋಗಿ, ಒಂದು ವಾರ ಇದ್ದು ಬಂದಿದ್ದರು. ಅಂದು ದಾರಿಯಲ್ಲಿ ಭೇಟಿಯಾದಾಗ, ತಾನು ಕೆಲಸ ಮಾಡುವ ಮನೆಯ ಯಜಮಾನರಾದ ಶ್ರೀರಂಗ ಅವರಿಗೆ ಹರಿಯಾಣಾ ಆಪರೇಷನ್ ಇದೆ ಎಂದಳು. ನಮ್ಮಲ್ಲಿಯೇ ಬೇಕಾದಂಥ ಆಸ್ಪತ್ರೆಗಳಿರುವಾಗ ಅವರೇಕೆ ಆಪರೇಶನ್‌ಗೆ ಹರಿಯಾಣಕ್ಕೆ ಹೊರಟರು ಎಂದು ನನಗೆ ಅಚ್ಚರಿಯಾಯಿತು. ಅವರ ಪತ್ನಿಗೆ ಫೋನ್ ಮಾಡಿ, 'ಆಪರೇಷನ್‌ಗೆ ಯಾಕೆ ಅಷ್ಟು ದೂರ ಹೋಗ್ತಾ ಇದ್ದಾರೆ?' ಎಂದೆ. 'ಇಲ್ಲವಲ್ಲ' ಎಂದು ಆಶ್ಚರ್ಯಪಟ್ಟರು. ಕಮಲಮ್ಮ ಹೇಳಿದ್ದನ್ನು ಅವರಿಗೆ ತಿಳಿಸಿದೆ. ಅವರು ಅವರು, 'ಅದು ಹರಿಯಾಣಾ ಅಲ್ಲ, ಹರ್ನಿಯಾ ಆಪರೇಷನ್' ಎಂದು ವಿವರಿಸಿದರು. ಕಮಲಮ್ಮನ ಬಾಯಿಯಲ್ಲಿ ಹರ್ನಿಯಾ ಹೋಗಿ ಹರಿಯಾಣಾ ಆಗಿದ್ದನ್ನು ನೆನೆದು ಇಬ್ಬರೂ ನಕ್ಕೆವು.

**ಪೂರ್ಣಿಮಾ ಎಚ್.ಎನ್.**





## ವಾಮಾಚಾರ

ಮೂರು ದಿನಗಳ ಕಚೇರಿ ಟೂರ್ ಮುಗಿಸಿ ಮನೆಗೆ ಬಂದಾಗ ಮನೆಯೊಳಗಿನಿಂದ ಜೋರು ಮಾತು–ನಗು ಕೇಳಿಬಂತು. ಅದೇ ವೇಳೆಗೆ ಮನೆಗೆಲಸದ ಪಾರ್ವತಿ ಆಚೆ ಬಂದಳು. 'ಏನದು ಅಷ್ಟೊಂದು ಗದ್ದಲ?' ಎಂದು ವಿಚಾರಿಸಿದಾಗ, ಆಕೆ,'ವಾಮಾಚಾರ ಸಾರ್' ಎಂದಷ್ಟೇ ಹೇಳಿ ಹೋದಳು. ಗಾಬರಿ ಹಾಗೂ ಆಶ್ಚರ್ಯದಿಂದ ಲಗುಬಗೆಯಿಂದ ಒಳಗೆ ಹೋಗಿ ನೋಡಿದಾಗ ಭಾಮೈದ ವಾಮನಾಚಾರಿ ಮನೆಗೆ ಬಂದಿದ್ದ. ಅವನದು ಮುಂದಿದ್ದವರನ್ನು ನಗಿಸುವ ಸ್ವಭಾವ. ಅದರಲ್ಲೂ ಅವನ ಅಕ್ಕ ಹಾಗೂ ತಾಯಿಗೆ ಅವನ ಮಾತುಗಳೆಂದರೆ ಬಹಳೇ ಅಚ್ಚುಮೆಚ್ಚು. ಮೂರೂ ಜನ ಮಾತಾಡಿ ನಗುತ್ತಿದ್ದರಷ್ಟೇ.

**ಅರವಿಂದ ಜಿ. ಜೋಷಿ**